ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯ ನಿರೀಕ್ಷಕರ ನೇಮಕಾತಿ.

2287(2795) ಶ್ರೀ ಸುಭಾಷ್ ಕಲ್ಲೂರ್ (ಹುಮನಾಬಾದ್) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳು ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

2) ಖಾಲಿ ಇರುವ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

3) ಈ ಹುದ್ದೆಗಳಿಗಾಗಿ ತರಬೇತಿಯನ್ನು ಪಡೆದಿರುವವರ ಸಂಖ್ಯೆ ಎಷ್ಟು? ಈ ತರಬೇತಿಯನ್ನು ಪಡೆದವರಿಗೆ ನೌಕರಿಗಾಗಿ ಆದೇಶ ನೀಡಲಾಗಿದೆಯೇ?

4) 1993-94ರಲ್ಲಿ ತರಬೇತಿ ಪಡೆದ ನೇಮಕಕ್ಕೆ ಬಾಕಿ ಉಳಿದಿರುವವರ ಸಂಖ್ಯೆ ಎಷ್ಟು? ಇವರಿಗೆ ಭರ್ತಿ ಮಾಡಿಕೊಳ್ಳಲು ಯಾವ ಕ್ರಮ ಕೈಗೊಳ್ಳಲಾಗುವುದು? ಎಂದಿನಿಂದ ಭರ್ತಿ ಮಾಡಿಕೊಳ್ಳಲಾಗುವುದು?

5) ತರಬೇತಿ ಪಡೆದು ಇಷ್ಟು ವರ್ಷಗಳಾದರೂ ಇದುವರೆವಿಗೂ ನೇಮಕ ಮಾಡಿಕೊಳ್ಳದಿರಲು ಕಾರಣಗಳೇನು? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) 891. ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿ ನೀಡಲಾಗಿದೆ.

2) ನೇಮಕಾತಿ ಮತ್ತು ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

3) ಒಟ್ಟು ತರಬೇತಿ ಪಡೆದಿರುವವರ ಸಂಖ್ಯೆ 507 ಇದರಲ್ಲಿ 1995-96ರಲ್ಲಿ 150 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.

4) 357. ಇದಕ್ಕಾಗಿ ಆಯ್ಕೆ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

5) ಇಲಾಖೆಯಲ್ಲಿ ಸಾಕಷ್ಟು ಸಂಖ್ಯೆಯ ಹುದ್ದೆಗಳು ಖಾಲಿ ಇಲ್ಲದ್ದರಿಂದ, ನೇರನೇಮಕಾತಿ ಮೇಲೆ ನಿಷೇಧ ಸ್ವಲ್ಪ ದಿನ ಇದ್ದುದರಿಂದ ಮತ್ತು ಕಾಲಕಾಲಕ್ಕೆ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿದೆ.

ಅನುಬಂಧ-1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೨೭೫೫ ಶ್ರೀ ಸುಭಾಷ್ ಕಲ್ಲೂರು, ವಿಧಾನಸಭಾ ಸದಸ್ಯರು.

	ಜಿಲ್ಲೆಗಳ ಹೆಸರು	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿಯಾದ ಹುದ್ದೆ
1.	ಬೆಂಗಳೂರು ನಗರ	84	28	56
2.	ಬೆಂಗಳೂರು ಗ್ರಾಮಾಂತರ	94	35	59
3.	ತುಮಕೂರು	95	45	50
4.	ಶಿವಮೊಗ್ಗ	77	49	28
5.	ಚಿತ್ರದುರ್ಗ	60	25	35
6.	ಕೋಲಾರ	96	34	62
7.	ದಾವಣಗೆರೆ	65	21	44
8.	ಮೈಸೂರು	67	46	21
9.	ಚಿಕ್ಕಮಗಳೂರು	62	29	33
10.	ಕೊಡಗು	60	24	36
11.	ದಕ್ಷಿಣ ಕನ್ನಡ	38	06	32
12.	ಹಾಸನ	78	40	38
13.	ಮಂಡ್ಯ	73	47	26
14.	ಉಡುಪಿ	27	12	15
15.	ಚಾಮರಾಜನಗರ	31	17	14
16.	ಬೆಳಗಾಂ	105	37	68
17.	ಉತ್ತರ ಕನ್ನಡ	33	25	08
18.	ಬಿಜಾಪುರ	63	47	16
19.	ಧಾರವಾಡ	87	58	29
20.	ಬಾಗಲಕೋಟೆ	67	36	31
21.	ಹಾವೇರಿ	38	07	31
22.	ಗದಗ	21	09	12
23.	ಗುಲ್ಬರ್ಗಾ	81	17	64
24.	ಬಳ್ಳಾರಿ	69	31	28
25.	ಬೀದರ್	57	36	21
26.	ರಾಯಚೂರು	21	01	20
27.	ಕೊಪ್ಪಳ	17	03	14
	ಒಟ್ಟು	1656	765	891

(ಜೂನ್ 2001 ಮಾಹೆಯಲ್ಲಿ 537 ಪರೀಕ್ಷಕರಿಗೆ ಮುಂಬಡ್ತಿ ನೀಡಿರುವುದರಿಂದ ಉಂಟಾದ ಖಾಲಿ ಹುದ್ದೆಗಳು ಸೇರಿ ಒಟ್ಟು ೯೯೧ ಹುದ್ದೆಗಳು ಖಾಲಿ ಇರುತ್ತದೆ.)